# ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

## ದಿನಾಂಕ 11–03–2011 ರಂದು ಬೆಳಿಗ್ಗೆ 11.00 ಗಂಟೆಗೆ ಪ್ರಾಧಿಕಾರದ ಮಾನ್ಯ ಅಧ್ಯಕ್ಷರ ಸೂಚನೆಯಂತೆ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯ ನಡುವಳಿಗಳು

* * * * *

**ವಿಷಯ ಸಂಖ್ಯೆ 01** ತುಮಕೂರು ನಗರದ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿ ವಿಸ್ತೀರ್ಣ 9 ಎಕರೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿನ್ಯಾಸ ಅನುಮೋದನೆಗೆ ದಿನಾಂಕ 21–02–2011 ರಂದು ಮೆ॥ ಮಂಜುನಾಥ ಪ್ಯಾಕೇಜಿಂಗ್ ಪ್ರೈ.ಲಿ., ರವರು ಅರ್ಜಿ ಸಲ್ಲಿಸಿರುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಮೆ॥ ಮಂಜುನಾಥ ಪ್ಯಾಕೇಜಿಂಗ್ ಪ್ರೈ.ಲಿ., ಬೆಂಗಳೂರು ರವರು ದಿನಾಂಕ 21–02–2011 ರಂದು ಅರ್ಜಿ ಸಲ್ಲಿಸಿ, ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿನ 9 ಎಕರೆ ಭೂ ಪ್ರದೇಶವನ್ನು ಸಾರ್ವಜನಿಕ ಉದ್ದೇಶಕ್ಕೆ ಭೂ ಸ್ವಾಧೀನಪಡಿಸಿಕೊಳ್ಳಲು ನೀಡಲಾಗಿದ್ದ ಸಮಯವು ಅಂದರೆ ದಿನಾಂಕ 12–01–2011 ರಂದು ಉಚ್ಛನ್ಯಾಯಾಲಯದ ಆದೇಶದಂತೆ 40 ದಿವಸಗಳು ದಿನಾಂಕ 22–02–2011 ಕ್ಕೆ ಪೂರ್ಣಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ತಮ್ಮ ಅರ್ಜಿಯಲ್ಲಿ ಅರ್ಜಿದಾರರು ತಿಳಿಸಿರುವಂತೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶದ ದಿನಾಂಕ 30–09–2010 ರ ಆದೇಶದಲ್ಲಿ ಎರಡನೇ ನಿರ್ದೇಶನವು ಪ್ರಕರಣದ ಎಲ್ಲಾ ಪ್ರತಿವಾದಿಗಳಿಗೆ ಅನ್ವಯವಾಗುತ್ತದೆ ಎಂದು ತಿಳಿಸಿ, ಶೀಘ್ರವಾಗಿ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರ 9 ಎಕರೆ ಪ್ರದೇಶವನ್ನ ವಾಸದ ಉದ್ದೇಶಕ್ಕೆ ವಿನ್ಯಾಸ ಅನುಮೋದನೆ ನೀಡಲು ಕೋರಿರುತ್ತಾರೆ. ಈ ಸಂಬಂಧ ಮಾನ್ಯ ಉಚ್ಛನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 2537–39/ 2010 (LB-RES) ರಲ್ಲಿ ದಿನಾಂಕ 30–09–2010 ರಂದು ನೀಡಿದ ತೀರ್ಪಿನ ಉಧೃತಭಾಗ ಕೆಳಕಂಡಂತಿರುತ್ತದೆ. a) In terms of the memo stated above, respondent No.1 to initiate acquisition proceedings and complete in the same within a time frame of three months from the date of receipt of copy of this order

b) If for any reason respondent No.1 fail to initiate acquisition proceedings as stated above, then the respondents are hereby directed to permit the petitioner to form a layout of residential sites in accordance with law. Ordered accordingly.

ಈ ತೀರ್ಪಿನ ಹಿನ್ನೆಲೆಯಲ್ಲಿ ದಿನಾಂಕ 11–10–2010 ರಂದು ನಡೆದ ಪ್ರಾಧಿಕಾರದ ವಿಶೇಷ ಸಭೆಯ ವಿಷಯ ಸಂಖ್ಯೆ 01 ರಲ್ಲಿ ವಿವಿಧ ಇಲಾಖೆಗಳಿಗೆ ಮತ್ತು ಸಾರ್ವಜನಿಕ ಉದ್ದೇಶಕ್ಕೆ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿ 9

ಎಕರೆ ಪ್ರದೇಶವು ಅಗತ್ಯವಿರುವುದರಿಂದ ಭೂಸ್ವಾಧೀನ ಪಡಿಸಿಕೊಳ್ಳಲು ಕ್ರಮಕೈಗೊಳ್ಳುವಂತೆ ಸರ್ಕಾರವನ್ನು ಕೋರಲು ತೀರ್ಮಾನಿಸಲಾಗಿತ್ತು.

ದಿನಾಂಕ 18-11-2010 ರಂದು ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರು ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಸೂಕ್ತ ಕ್ರಮಕೈಗೊಂಡು ಹಲವು ಇಲಾಖೆಗಳಿಗೆ ಸ್ಥಳದ ಅವಶ್ಯಕತೆ ಇರುವುದರಿಂದ ಪ್ರಸ್ತಾವಿತ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಮುಂದಿನ ಕ್ರಮವಹಿಸುವಂತೆ ಸೂಚಿಸಿದ್ದರು. ಈ ಸಂಬಂಧ ಜಿಲ್ಲಾಧಿಕಾರಿಗಳು ತಮ್ಮ ಪತ್ರ ಸಂಖ್ಯೆ ಎಲ್‌ಎಕ್ಯೂ. ಸಿ.ಆರ್.319/2010-11 ದಿನಾಂಕ 22-11-2010 ರಲ್ಲಿ ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ತುಮಕೂರು ಉಪವಿಭಾಗ, ತುಮಕೂರು ರವರಿಗೆ ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ.

ಬೆಂಗಳೂರು ವಿದ್ಯುತ್ ಕಂಪನಿ ನಿಯಮಿತ, ತನ್ನ ತುಮಕೂರು ವೃತ್ತ ಕಛೇರಿ, ವಿಭಾಗೀಯ ಕಛೇರಿ ಮತ್ತು ವಿಭಾಗೀಯ ಉಗ್ರಾಣ ಹಾಗೂ ಇತರೇ ಕಟ್ಟಡಗಳನ್ನು ನಿರ್ಮಿಸಲು 7 ಎಕರೆ ಜಮೀನು ಹಾಗೂ ತುಮಕೂರು ಮಹಾನಗರ ಪಾಲಿಕೆಯು ತನ್ನ ವಲಯ ಕಛೇರಿಗೆ 2 ಎಕರೆ ಜಮೀನು ಅವಶ್ಯಕತೆ ಇದೆಯೆಂದು ಬೇಡಿಕೆ ಸಲ್ಲಿಸಿದ ಹಿನ್ನೆಲೆಯಲ್ಲಿ ದಿನಾಂಕ 16-12-2010 ರಂದು ಉಪವಿಭಾಗಾಧಿಕಾರಿಗಳು, ತುಮಕೂರು ಉಪವಿಭಾಗ, ತುಮಕೂರು ಇವರು ಪ್ರಸ್ತಾವಿತ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಸಂಬಂಧ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಹಾಗೂ ಆಯುಕ್ತರು, ಮಹಾನಗರ ಪಾಲಿಕೆ, ತುಮಕೂರು ಇವರಿಗೆ ಭೂಸ್ವಾಧೀನಕ್ಕೆ ಸಂಬಂಧಿಸಿದ ಠೇವಣಿಯನ್ನು ಇಡಲು ಸೂಚಿಸಲಾಗಿರುತ್ತದೆ ಎಂಬುದಾಗಿ ಜಿಲ್ಲಾಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿರುತ್ತಾರೆ.

ಉಪವಿಭಾಗಾಧಿಕಾರಿಗಳು ತಮ್ಮ ಪತ್ರ ಸಂಖ್ಯೆ ಎಲ್‌ಎಕ್ಯೂ / ಸಿಆರ್ / 5 / 2010-11 ದಿನಾಂಕ 29-12-2010 ರಲ್ಲಿ ಈ ಭೂಸ್ವಾಧೀನ ಪ್ರಕ್ರಿಯೆಯನ್ನು ಭೂಸ್ವಾಧೀನ ಕಾಯ್ದೆ 1894 ರಂತೆ ನಿಯಮಾನುಸಾರ ಹಂತ ಹಂತವಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ ಹೆಚ್ಚಿನ ಕಾಲಾವಕಾಶ ಅವಶ್ಯಕತೆ ಇರುತ್ತದೆ. ಆದ್ದರಿಂದ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಲು ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರನ್ನು ಕೋರಲು ದಿನಾಂಕ 29-12-2010 ಜಿಲ್ಲಾಧಿಕಾರಿಗಳನ್ನು ಕೋರಿರುತ್ತಾರೆ.

ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಆದೇಶ ದಿನಾಂಕ 30-09-2010 ರಂತೆ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿನ 9 ಎಕರೆ ಭೂ ಪ್ರದೇಶವನ್ನು ಸಾರ್ವಜನಿಕ / ಅರೆ ಸಾರ್ವಜನಿಕ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಭೂ ಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಿ ಪೂರ್ಣ

ಗೊಳಿಸಬೇಕಾಗಿರುತ್ತದೆ. ಆದರೆ ಮಾನ್ಯ ಉಚ್ಛನ್ಯಾಯಾಲಯದ ಆದೇಶದಂತೆ ಕ್ರಮವಾಗದ ಕಾರಣ ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ರವರ ಪತ್ರ ಸಂಖ್ಯೆ ಎಲ್ಎಕ್ಯೂ/ಸಿಆರ್/319/2010–11 ದಿನಾಂಕ 30–12–2010 ರಂತೆ ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಮನವಿ ಸಲ್ಲಿಸಿ, ಹೆಚ್ಚುವರಿ ಕಾಲಾವಕಾಶವನ್ನು ನೀಡುವಂತೆ ಉಚ್ಛನ್ಯಾಯಾಲಯಕ್ಕೆ ಮಧ್ಯಂತರ ವರದಿ ಸಲ್ಲಿಸಲು ಕೋರಿರುತ್ತಾರೆ. ಕರ್ನಾಟಕ ಉಚ್ಛನ್ಯಾಯಾಲಯವು ದಿನಾಂಕ 12–01–2011 ರ ಆದೇಶದಂತೆ 40 ದಿವಸಗಳ ಕಾಲಾವಕಾಶವನ್ನು ಅಂತಿಮವಾಗಿ ನೀಡಿದ್ದು, ತೀರ್ಪಿನ ಉಧೃತ ಭಾಗ ಕೆಳಕಂಡಂತಿರುತ್ತದೆ.

By consent of both the parties, this court by order dated 30-09-2010, disposed the writ petition on certain terms. Even after lapse of Three months, the first respondent has not initiated the acquisition proceedings. For the reasons stated in the applications, as a last chance, another 40 days time is extended. It is made clear that the respondents are not entitled for any further extension of time.

ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ರವರ ಪತ್ರ ದಿನಾಂಕ 22–11–2010 ರಂತೆ ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ತುಮಕೂರು ಉಪವಿಭಾಗ, ತುಮಕೂರು ರವರು ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿನ 9 ಎಕರೆ ಭೂ ಪ್ರದೇಶವನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು, ಬೆಸ್ಕಾಂ ಸಂಸ್ಥೆಯವರು ದಿನಾಂಕ 29–01–2011 ರಂದು ಠೇವಣಿ ಮೊತ್ತ ರೂ.1,00,00,000 (ಒಂದು ಕೋಟಿ) ಗಳನ್ನು ಠೇವಣಿ ಮಾಡಿರುತ್ತಾರೆ. ಈ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ರವರ ಕಾರ್ಯಾಲಯದ ಕ್ರಮಾಂಕ ಎಲ್ಎಕ್ಯೂ/ಸಿಆರ್/39/2010–11 ದಿನಾಂಕ 03–02–2011 ರಂತೆ 7 ಎಕರೆ ಭೂ ಪ್ರದೇಶವನ್ನು ಭೂ ಸ್ವಾಧೀನ ಕಾಯ್ದೆ 1894 ಕಲಂ 4(1) ರ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ. ಅಧೀಕ್ಷಕ ಇಂಜಿನಿಯರ್ (ವಿ), ವಾಣಿಜ್ಯ, ಕಾರ್ಯ ಮತ್ತು ಪಾಲನಾ ವೃತ್ತ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ತುಮಕೂರು ರವರು ದಿನಾಂಕ 01–03–2011 ರಂದು ರೂ.1,58,04,400 (ಒಂದು ಕೋಟಿ ಐವತ್ತೆಂಟು ಲಕ್ಷದ ನಾಲ್ಕು ಸಾವಿರದ ನಾಲ್ಕು ನೂರು ರೂಪಾಯಿಗಳು ಮಾತ್ರ) ಗಳನ್ನು ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳ ಕಛೇರಿಯಲ್ಲಿ ಠೇವಣಿ ಮಾಡಿರುವುದಾಗಿ ತಿಳಿದು ಬಂದಿರುತ್ತದೆ.

ಇದೇ ರೀತಿ ದಿನಾಂಕ 23-01-2011 ರಂದು ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ರವರು ಭೂಸ್ವಾಧೀನ ವೆಚ್ಚದ ಠೇವಣಿ ಮೊತ್ತ ರೂ.66,48,000 ಗಳನ್ನು ಠೇವಣಿ ಮಾಡಿರುತ್ತಾರೆ. ಈ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ರವರ ಕಾರ್ಯಾಲಯದ ಆದೇಶ ಕ್ರಮಾಂಕ ಎಲ್‌ಎಕ್ಯೂ/ಎಸ್‌ಆರ್/41/2010-11 ದಿನಾಂಕ 28-02-2011 ರಂತೆ ಎರಡು ಎಕರೆ ಜಮೀನನ್ನು ಭೂ ಸ್ವಾಧೀನ ಕಾಯ್ದೆ 1894 ಕಲಂ 4(1) ರ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ.

ಸರ್ಕಾರದ ಪತ್ರ ಸಂಖ್ಯೆ ನಅಇ / 01 / ಬೆಂರೂಪ್ರಾ / 2011 ದಿನಾಂಕ 21-02-2011 ಮತ್ತು ಸಮ ಸಂಖ್ಯೆ ಪತ್ರ ದಿನಾಂಕ 24-02-2011 ರಲ್ಲಿ ಈ ಎಲ್ಲಾ ವಿಷಯಗಳ ಸಂಬಂಧ ವಿವರವಾದ ವರದಿಯನ್ನು ಸಲ್ಲಿಸಲು ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರು ಸೂಚಿಸಿರುತ್ತಾರೆ. ಅದರಂತೆ ದಿನಾಂಕ 23-02-2011 ಮತ್ತು 03-03-2011 ರಂದು ಸರ್ಕಾರಕ್ಕೆ ವಿವರವಾದ ವರದಿ ಸಲ್ಲಿಸಲಾಗಿದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 30-09-2010 ರಂದು ನೀಡಿದ ಆದೇಶದಲ್ಲಿ ಪ್ರತಿವಾದಿಗಳು ಭೂಸ್ವಾಧೀನದ ಪ್ರಕ್ರಿಯೆಯನ್ನು ನಿಗಧಿತ ಮೂರು ತಿಂಗಳ ಅವಧಿಯಲ್ಲಿ ಪ್ರಾರಂಭಿಸಿ ಪೂರ್ಣಗೊಳಿಸುವಂತೆ ಸೂಚಿಸಲಾಗಿರುತ್ತದೆ. ಸದರಿ ಅವಧಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಪೂರ್ಣಗೊಳಿಸದ ಕಾರಣ ಕರ್ನಾಟಕ ಉಚ್ಚನ್ಯಾಯಾಲಯವು ದಿನಾಂಕ 12-01-2011 ರ ಆದೇಶದಲ್ಲಿ ಅಂತಿಮವಾಗಿ 40 ದಿವಸಗಳ ಕಾಲಾವಕಾಶವನ್ನು ನೀಡಿರುತ್ತದೆ. ಕರ್ನಾಟಕ ಮಾನ್ಯ ಉಚ್ಚನ್ಯಾಯಾಲಯದ ಆದೇಶ ದಿನಾಂಕ 30-09-2010 ರಲ್ಲಿ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿನ 9 ಎಕರೆ ಭೂ ಪ್ರದೇಶದ ಭೂ ಸ್ವಾಧೀನ ಪ್ರಕ್ರಿಯೆಯು ಪ್ರಾರಂಭಗೊಂಡು ಪೂರ್ಣಗೊಂಡಿರುವುದಿಲ್ಲ. ಆದ್ದರಿಂದ ಸದರಿ ಭೂ ಪ್ರದೇಶವನ್ನು ವಸತಿ ಯೋಜನೆಯ ವಿನ್ಯಾಸ ಅನುಮೋದನೆಗೆ ಕರ್ನಾಟಕ ಉಚ್ಚನ್ಯಾಯಾಲಯದ ನಿರ್ದೇಶನದಂತೆ ಪರಿಗಣಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಪ್ರಸ್ತಾವಿತ ಪ್ರಕರಣದಲ್ಲಿ ಕರ್ನಾಟಕ ಉಚ್ಚನ್ಯಾಯಾಲಯವು ದಿನಾಂಕ 30-09-2010 ರಂದು ನೀಡಿದ ಆದೇಶದಲ್ಲಿ ಪ್ರತಿವಾದಿಗಳು ಭೂಸ್ವಾಧೀನದ ಪ್ರಕ್ರಿಯೆಯನ್ನು ನಿಗಧಿತ ಮೂರು ತಿಂಗಳ ಅವಧಿಯಲ್ಲಿ ಪ್ರಾರಂಭಿಸಿ

ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿರುತ್ತದೆ. ಈ ಅವಧಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಪೂರ್ಣಗೊಳಿಸದ ಕಾರಣ ಮನವಿಯಂತೆ ಮಾನ್ಯ ಉಚ್ಛನ್ಯಾಯಾಲಯವು ದಿನಾಂಕ 12-01-2011 ರ ಆದೇಶದಲ್ಲಿ ಅಂತಿಮವಾಗಿ 40 ದಿವಸಗಳ ಕಾಲಾವಕಾಶವನ್ನು ನೀಡಿರುತ್ತದೆ. ಕರ್ನಾಟಕ ಮಾನ್ಯ ಉಚ್ಛನ್ಯಾಯಾಲಯದ ಆದೇಶ ದಿನಾಂಕ 30-09-2010 ರಲ್ಲಿ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿನ 9 ಎಕರೆ ಭೂ ಪ್ರದೇಶದ ಭೂ ಸ್ವಾಧೀನ ಪ್ರಕ್ರಿಯೆಯು ಪ್ರಾರಂಭಗೊಂಡು ಪೂರ್ಣಗೊಂಡಿರುವುದಿಲ್ಲ. ಆದ್ದರಿಂದ ನ್ಯಾಯಾಲಯದ ನಿರ್ದೇಶನದಂತೆ ಪ್ರಸ್ತಾವಿತ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿರುವ 9 ಎಕರೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಉಪಯೋಗದ ವಿನ್ಯಾಸ ಅನುಮೋದನೆಗೆ ಪರಿಗಣಿಸಬೇಕಾಗಿರುತ್ತದೆ. ಸದರಿ ಮಾಹಿತಿಯನ್ನು ಪ್ರಾಧಿಕಾರದ ವಿಶೇಷ ಸಭೆಯ ಅವಗಾಹನೆಗಾಗಿ ಸಲ್ಲಿಸಲಾಗಿದೆ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಕರ್ನಾಟಕ ಉಚ್ಛನ್ಯಾಯಾಲಯವು ದಿನಾಂಕ 30-09-2010 ರಂದು ನೀಡಿದ ಆದೇಶದಲ್ಲಿ ಪ್ರತಿವಾದಿಗಳು ಭೂಸ್ವಾಧೀನದ ಪ್ರಕ್ರಿಯೆಯನ್ನು ನಿಗಧಿತ ಮೂರು ತಿಂಗಳ ಅವಧಿಯಲ್ಲಿ ಪ್ರಾರಂಭಿಸಿ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿರುತ್ತದೆ. ಈ ಅವಧಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಪೂರ್ಣಗೊಳಿಸದ ಕಾರಣ ಮಾನ್ಯ ಉಚ್ಛನ್ಯಾಯಾಲಯವು ದಿನಾಂಕ 12-01-2011 ರ ಆದೇಶದಲ್ಲಿ ಅಂತಿಮವಾಗಿ 40 ದಿವಸಗಳ ಕಾಲಾವಕಾಶವನ್ನು ನೀಡಿರುತ್ತದೆ. ಕರ್ನಾಟಕ ಉಚ್ಛನ್ಯಾಯಾಲಯದ ಆದೇಶ ದಿನಾಂಕ 30-09-2010 ರಲ್ಲಿ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿನ 9 ಎಕರೆ ಭೂ ಪ್ರದೇಶದ ಭೂ ಸ್ವಾಧೀನ ಪ್ರಕ್ರಿಯೆಯು ಪ್ರಾರಂಭಗೊಂಡು ಪೂರ್ಣಗೊಂಡಿರುವುದಿಲ್ಲವೆಂದು ತಿಳಿಸುತ್ತಾ, ನ್ಯಾಯಾಲಯದ ಆದೇಶದ ಪ್ರಕಾರ ಲೇಔಟ್ ಮಂಜೂರು ನೀಡಬೇಕೆಂದು ಕೋರಿರುವ ಮನವಿಯನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿತು.

ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿ 9 ಎಕರೆ ಭೂ ಪ್ರದೇಶಕ್ಕೆ ಸಂಬಂಧಿಸಿದಂತೆ ಕರ್ನಾಟಕ ಉಚ್ಛ ನ್ಯಾಯಾಲಯದ ನಿರ್ದೇಶನದಂತೆ ನಿಗಧಿತ ಸಮಯದಲ್ಲಿ ಭೂಸ್ವಾಧೀನ ಪ್ರಕ್ರಿಯೆಯು ಪ್ರಾರಂಭಗೊಂಡು ಪೂರ್ಣಗೊಳ್ಳದಿದ್ದಲ್ಲಿ, ಸದರಿ ಭೂ ಪ್ರದೇಶಕ್ಕೆ ವಸತಿ ಯೋಜನೆಗೆ ವಿನ್ಯಾಸ ಅನುಮೋದನೆ ಮಾಡಬೇಕಾಗಿರುತ್ತದೆ ಎಂಬ ಅಂಶವನ್ನು ಚರ್ಚಿಸಲಾಯಿತು. ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರುರವರು ಪ್ರಸ್ತಾವಿತ ಪ್ರದೇಶದ ಭೂಸ್ವಾಧೀನ ಪ್ರಕ್ರಿಯೆ ಸಂಬಂಧ ಭೂಸ್ವಾಧೀನ ಅಧಿನಿಯಮ 4(1) ನೇ ಪ್ರಕರಣದ ಮೇರೆಗೆ ಉದ್ದೇಶಿತ ಭೂ ಪ್ರದೇಶಕ್ಕೆ ದಿನಾಂಕ 03-02-2011 ರಂದು ಏಳು ಎಕರೆ ಮತ್ತು ದಿನಾಂಕ 28-02-2011 ರಂದು ಎರಡು ಎಕರೆಗೆ ಘೋಷಣೆಯನ್ನು ಜಿಲ್ಲಾಧಿಕಾರಿಗಳು ಹೊರಡಿಸಲಾಗಿದ್ದು, ಸದರಿ ಘೋಷಣೆಯು ಕ್ರಮವಾಗಿ ದಿನಾಂಕ

07-03-2011 ರಂದು ಮತ್ತು 09-03-2011 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಪ್ರಾಧಿಕಾರದ ಸದಸ್ಯರಾದ ಶ್ರೀ ರವಿಶಂಕರ್ ರವರು ಈ ಒಂದೇ ವಿಷಯಕ್ಕೆ ವಿಶೇಷ ಸಭೆಯನ್ನು ಕರೆಯುವ ಅವಶ್ಯಕತೆಯಿತ್ತೆ? ಭೂ ಸ್ವಾಧೀನ ಪ್ರಕ್ರಿಯೆಯು ಪ್ರಾರಂಭಗೊಂಡು 4(1) ರ ಅಧಿಸೂಚನೆ ಪ್ರಕಟಗೊಂಡ ನಂತರ ವಿನ್ಯಾಸ ಅನುಮೋದನೆಯನ್ನು ನಗರಾಭಿವೃದ್ಧಿ ಪ್ರಾಧಿಕಾರವು ಮಾಡಲು ನಿಯಮಗಳಲ್ಲಿ ಅವಕಾಶವಿದೆಯೇ ಎಂಬ ಮಾಹಿತಿಯನ್ನು ಕೋರಿ ದಿನಾಂಕ 30-10-2010 ರ ಕರ್ನಾಟಕ ಉಚ್ಚನ್ಯಾಯಾಲಯದ ಆದೇಶದ (ಬ) ಭಾಗದ ನಿರ್ದೇಶನದಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಗೊಳಿಸಬೇಕೆಂದು ಇರುವ ಅಂಶವನ್ನು ಸಭೆಯ ಗಮನಕ್ಕೆ ತಂದು, ಭೂಸ್ವಾಧೀನ ಅಧಿಸೂಚನೆ 4(1) ರ ಘೋಷಣೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಈಗಾಗಲೇ ಪ್ರಕಟವಾಗಿದ್ದು, ಕರ್ನಾಟಕ ಉಚ್ಚನ್ಯಾಯಾಲಯದ ನಿರ್ದೇಶನದಂತೆ ಕ್ರಮವಿಟ್ಟಿರುವ ಕಾರಣ ವಿನ್ಯಾಸ ಅನುಮೋದನೆಗೆ ಅವಕಾಶವಿರುವುದಿಲ್ಲ.ಈ ವಿಷಯವು ನ್ಯಾಯಾಲಯದಲ್ಲಿರುವುದರಿಂದ ವಿಷಯವನ್ನು ಚರ್ಚಿಸುವುದು ಸೂಕ್ತವಲ್ಲ ಎಂದು ತಮ್ಮ ಅಭಿಪ್ರಾಯ ಮಂಡಿಸಿದರು.

ಜಿಲ್ಲಾಧಿಕಾರಿಗಳ ಪರವಾಗಿ ಸಭೆಯಲ್ಲಿ ಉಪಸ್ಥಿತರಿದ್ದ ಅಪರ ಜಿಲ್ಲಾಧಿಕಾರಿಗಳು, ತುಮಕೂರು ರವರು ನ್ಯಾಯಾಲಯದ ನಿರ್ದೇಶನದಂತೆ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದ್ದು, ಆದೇಶ ಕ್ರಮಾಂಕ ಎಲ್‌ಎಕ್ಯೂ/ಎಸ್.ಆರ್./39/2010-11 ದಿನಾಂಕ 03-02-2011 ರಲ್ಲಿ ಏಳು ಎಕರೆ ಭೂ ಪ್ರದೇಶವನ್ನು ಅಧೀಕ್ಷಕ ಇಂಜಿನಿಯರ್ (ವಿ), ವಾಣಿಜ್ಯ, ಕಾರ್ಯ ಮತ್ತು ಪಾಲನಾ ವೃತ್ತ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ತುಮಕೂರು ರವರ ಪತ್ರ ಸಂಖ್ಯೆ ಅ.ಇಂ.(ವಿ)/ ಸ.ಕಾ.ಇಂ.(ಕಾ)ತು/2010-11/8997-99 ದಿನಾಂಕ 20-01-2011 ರ ಕೋರಿಕೆಯಂತೆ ಹಾಗೂ ನಂತರ ಸಲ್ಲಿಸಿರುವ ಪ್ರಸ್ತಾವನೆಯಂತೆ ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ತುಮಕೂರು ಉಪವಿಭಾಗ, ತುಮಕೂರು ರವರ ಶಿಫಾರಸ್ಸಿನಂತೆ ಭೂಸ್ವಾಧೀನ ಅಧಿನಿಯಮ 4(1) ರ ಘೋಷಣೆಯನ್ನು ಹೊರಡಿಸಲಾಗಿರುತ್ತದೆ. ಇದೇ ರೀತಿ ತುಮಕೂರು ಮಹಾನಗರಪಾಲಿಕೆ ಎರಡು ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಆದೇಶ ಕ್ರಮಾಂಕ ಎಲ್‌ಎಕ್ಯೂ/ಎಸ್‌ಆರ್/41/2010-11 ದಿನಾಂಕ 28-02-2011 ರಂತೆ 4(1) ರ ಘೋಷಣೆಯನ್ನು ಹೊರಡಿಸಿರುವುದಾಗಿ ಸಭೆಯ ಗಮನಕ್ಕೆ ತಿಳಿಸಿದರು.

ಆಯುಕ್ತರು, ಮಹಾನಗರಪಾಲಿಕೆ, ತುಮಕೂರುರವರು ಮಹಾನಗರ ಪಾಲಿಕೆಯ ವಲಯ ಕಛೇರಿ ನಿರ್ಮಾಣಕ್ಕೆ ಎರಡು ಎಕರೆ ಭೂ ಪ್ರದೇಶ ಅಗತ್ಯವಿದ್ದು, ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿನ ಎರಡು ಎಕರೆ ಪ್ರದೇಶವನ್ನು ಮಹಾನಗರಪಾಲಿಕೆಗೆ ಭೂಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆಯನ್ನು ಸಲ್ಲಿಸಲು

ತೆಗೆದುಕೊಂಡಕ್ರಮದ ಮಾಹಿತಿಯನ್ನು ಸಭೆಗೆ ತಿಳಿಸಿ, ಭೂಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಳ್ಳಲು ನಿಯಮಗಳಂತೆ ಕನಿಷ್ಠ ಏಳು ತಿಂಗಳ ಅವಧಿ ಅಗತ್ಯವಿರುತ್ತದೆ. ಆದ್ದರಿಂದ ಮುಂದೆ ನ್ಯಾಯಾಲಯವು ನೀಡಬಹುದಾದ ವಿಸ್ತೃತ ಕಾಲಾವಕಾಶವು ಆದೇಶ ನೀಡಿದ ದಿನಾಂಕದಿಂದ ನಾಲ್ಕು ತಿಂಗಳ ಅಗತ್ಯವಿರುತ್ತದೆ ಎಂಬುದಾಗಿ ಅಭಿಪ್ರಾಯವನ್ನು ಸಭೆಯಲ್ಲಿ ಮಂಡಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ತುಮಕೂರು ಗ್ರಾಮಾಂತರ ಕ್ಷೇತ್ರದ ವಿಧಾನಸಭಾ ಸದಸ್ಯರು ನ್ಯಾಯಾಲಯದ ಆದೇಶದಂತೆ ನಿಗಧಿತ ಕಾಲದಲ್ಲಿ ಭೂಸ್ವಾಧೀನ ಪ್ರಕ್ರಿಯೆಯು ಪ್ರಾರಂಭವಾಗಬೇಕಿರುತ್ತದೆ. ಸದರಿ ಪ್ರಕ್ರಿಯೆಯು ಭೂಸ್ವಾಧೀನ ಕಾಯ್ದೆಯ ನಿಯಮಗಳಂತೆ ಈಗಾಗಲೇ ಪ್ರಾರಂಭಗೊಂಡಿದ್ದು, ಕರ್ನಾಟಕ ರಾಜ್ಯ ಪತ್ರದಲ್ಲಿ 4(1) ರ ಘೋಷಣೆಯು ಪ್ರಕಟಗೊಂಡಿರುತ್ತದೆ. ಅಲ್ಲದೇ ಪ್ರಕರಣವು ನ್ಯಾಯಾಲದಲ್ಲಿರುವುದರಿಂದ ಈ ಸಂದರ್ಭದಲ್ಲಿ ಯಾವುದೇ ತೀರ್ಮಾನ ತೆಗೆದುಕೊಳ್ಳುವುದು ಸಮಂಜಸವಾಗಿರುವುದಿಲ್ಲ. ಆದುದರಿಂದ ಪ್ರಕರಣದ ಪ್ರಥಮ ಪ್ರತಿವಾದಿಯಾದ ಸರ್ಕಾರಕ್ಕೆ ಈ ಎಲ್ಲಾ ಅಂಶಗಳ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸಿ, ಸರ್ಕಾರದ ಮುಖಾಂತರ ಭೂಸ್ವಾಧೀನ ಸಂಬಂಧ ತಹಲ್‌ವರೆಗೆ ಕೈಗೊಂಡಿರುವ ಕ್ರಮದ ಬಗ್ಗೆ ಉಚ್ಚನ್ಯಾಯಾಲಯದ ಗಮನಕ್ಕೆ ತರಬಹುದೆಂದು ಅಭಿಪ್ರಾಯ ಪಟ್ಟರು.

ಸಭೆಯಲ್ಲಿ ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳ ಪರವಾಗಿ ಹಾಜರಿದ್ದ ಪ್ರತಿನಿಧಿಯು ಭೂಸ್ವಾಧೀನ ಪ್ರಕ್ರಿಯೆಯು ಪ್ರಾರಂಭಗೊಂಡಿದ್ದು, ಅಧೀಕ್ಷಕ ಇಂಜಿನಿಯರ್ (ವಿ), ವಾಣಿಜ್ಯ, ಕಾರ್ಯ ಮತ್ತು ಪಾಲನಾ ವೃತ್ತ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ತುಮಕೂರು ರವರ ಪತ್ರ ಸಂಖ್ಯೆ ಆ.ಇಂ.(ವಿ)/ಸ.ಕಾ.ಇಂ.(ಕಾ)ತು/2010-11/8997-99 ದಿನಾಂಕ 20-01-2011 ರಂತೆ ಪತ್ರ ಬರೆದು, ಮುಖ್ಯ ಇಂಜಿನಿಯರ್ (ವಿ), ಚಿತ್ರದುರ್ಗ ವಲಯರವರು ಸ್ಥಳ ಪರಿಶೀಲಿಸಿರುತ್ತಾರೆ ಹಾಗೂ ಉದ್ದೇಶಿತ ಭೂಪ್ರದೇಶವು ಸಂಸ್ಥೆಗೆ ಅತ್ಯಾವಶ್ಯಕವಾಗಿರುತ್ತದೆ ಎಂಬುದಾಗಿ ತಿಳಿಸಿರುತ್ತಾರೆ ಹಾಗೂ ಭೂಸ್ವಾಧೀನಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಬೆಸ್ಕಾಂ ಮತ್ತು ಮಹಾನಗರಪಾಲಿಕೆಯವರು ಸಲ್ಲಿಸಿರುವ ಪ್ರಸ್ತಾವನೆಯಂತೆ ಕ್ರಮಕೈಗೊಳ್ಳಲಾಗಿದ್ದು, ಇದಕ್ಕೆ ಪೂರಕವಾಗಿ ಬೆಸ್ಕಾಂ ಸಂಸ್ಥೆಯವರು ದಿನಾಂಕ 21-01-2011 ರಂದು ರೂ.1,00,00,000 (ಒಂದು ಕೋಟಿ) ಗಳನ್ನು ಮತ್ತು ದಿನಾಂಕ 01-03-2011 ರಂದು ರೂ.1,58,04,400 (ಒಂದು ಕೋಟಿ ಐವತ್ತೆಂಟು ಲಕ್ಷದ ನಾಲ್ಕು ಸಾವಿರದ ನಾಲ್ಕು ನೂರು ರೂಪಾಯಿಗಳು ಮಾತ್ರ) ಗಳ ಠೇವಣಿ ಮಾಡಿರುತ್ತಾರೆ. ಇದೇ ರೀತಿ ಆಯುಕ್ತರು, ಮಹಾನಗರ ಪಾಲಿಕೆ, ತುಮಕೂರು ರವರು ಉಳಿದ ಎರಡು ಭೂ ಪ್ರದೇಶಕ್ಕೆ ದಿನಾಂಕ 23-03-2011 ರಂದು ಭೂಸ್ವಾಧೀನದ ಠೇವಣಿ ಮೊತ್ತ ರೂ.66,48,000 (ಆರವತ್ತಾರು ಲಕ್ಷದ ನಲವತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ಗಳನ್ನು

ಠೇವಣಿ ಮಾಡಲಾಗಿರುತ್ತದೆ ಎಂದು ಹಾಗೂ ಉದ್ದೇಶಿತ ಭೂಪ್ರದೇಶಕ್ಕೆ ಭೂಸ್ವಾಧೀನ ಪ್ರಕ್ರಿಯೆ 4(1) ನೇ ಪ್ರಕರಣದ ಮೇರೆಗೆ ಘೋಷಣೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಕ್ರಮವಾಗಿ ದಿನಾಂಕ 07-03-2011 ಮತ್ತು 09-03-2011 ರಂದು ಪ್ರಕಟಣೆಯಾಗಿರುತ್ತದೆ ಸಭೆಗೆ ತಿಳಿಸಿದರು.

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಶ್ರೀ ರವಿರವರು ಕರ್ನಾಟಕ ಭೂಸ್ವಾಧೀನ ಕಾಯ್ದೆ 1894 ಕಲಂ 4(1) ರ ಅಧಿಸೂಚನೆಯ ಪ್ರಕಾರ ಗರಿಷ್ಠ ಒಂದು ವರ್ಷದೊಳಗಾಗಿ 6(1) ರ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ ಎಂದು ಅಭಿಪ್ರಾಯಿಸಿದರು. ಅದರಂತೆ ಭೂಸ್ವಾಧೀನ ಪ್ರಕ್ರಿಯೆಯು ಈಗಾಗಲೇ ಪ್ರಾರಂಭಗೊಂಡಿರುವ ಹಿನ್ನೆಲೆಯಲ್ಲಿ ಉದ್ದೇಶಿತ ಭೂಪ್ರದೇಶಕ್ಕೆ ವಿನ್ಯಾಸ ಅನುಮೋದನೆ ನೀಡುವುದು ಭೂಸ್ವಾಧೀನ ಕಾಯ್ದೆಯನ್ವಯ ಉಲ್ಲಂಘನೆಯಾಗಬಹುದೆಂದು ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರುರವರು ನ್ಯಾಯಾಲಯದ ಆದೇಶದಂತೆ ಭೂಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಳ್ಳದೇ ಇರುವುದರಿಂದ ಪ್ರಸ್ತಾವಿತ ಪ್ರದೇಶಕ್ಕೆ ವಸತಿಗಾಗಿ ವಿನ್ಯಾಸ ಅನುಮೋದನೆ ಮಾಡಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಉದ್ದೇಶಿತ ಭೂ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆಗಾಗಿ ಮೆ॥ ಮಂಜುನಾಥ ಪ್ಯಾಕೇಜಿಂಗ್ ಪ್ರೈ.ಲಿ., ರವರು ದಿನಾಂಕ 21-02-2011 ರಂದು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವಸತಿ ವಿನ್ಯಾಸ ಅನುಮೋದನೆಗೆ ಸಲ್ಲಿಸಿರುವ ಅರ್ಜಿ ಸಂಬಂಧ ಪ್ರಾಧಿಕಾರದ ಕಾನೂನು ಸಲಹೆಗಾರರು ದಿನಾಂಕ 09-03-2011 ರಂದು ನೀಡಿರುವ ಸಲಹೆಯನ್ನು ಪ್ರಾಧಿಕಾರದ ಸಭೆಯ ಗಮನಕ್ಕೆ ತರಲಾಯಿತು.

ಕಾನೂನು ಸಲಹೆಗಾರರ ಅಭಿಪ್ರಾಯವು ಈ ಕೆಳಕಂಡಂತಿರುತ್ತದೆ.

That the Hon'ble High Court of Karnataka has passed an order dated 30th September 2010 directing the state of Karnataka to "initiate acquisition proceedings and complete the same within a time frame of Three months from the date of receipt of this order". Further the Hon'ble High Court of Karnataka has extended the time limit by another 40 days. Unfortunately the acquisition proceedings are not completed even after 40 days extended period as directed by the Hon'ble High Court.

However acquisition proceedings are initiated with respect to 9.00 acres of land in the said survey number and a notification has been issued under Sec. 4(1) of the Land Acquisition Act. As such an encumbrance is created on the said land in the circumstances narrated above it may be difficult to approve the layout as prayed by the owner of the land. Hence I advise you not to proceed with the same.

ಸಭೆಯಲ್ಲಿ ಉಪಸ್ಥಿತರಿದ್ದ ತುಮಕೂರು ನಗರ ವಿಧಾನಸಭಾ ಸದಸ್ಯರು ಈ ಜಮೀನಿನ ವಿಷಯವು ನ್ಯಾಯಾಲಯದಲ್ಲಿದ್ದು, ಉದ್ದೇಶಿತ ಭೂಪ್ರದೇಶಕ್ಕೆ ಭೂಸ್ವಾಧೀನ ಪ್ರಕರಣ 4(1) ಘೋಷಣೆಯಾಗಿದ್ದು ಈ ಸಂಬಂಧ ಸರ್ಕಾರವು ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕಾದ ಕಾರಣ ಸರ್ಕಾರಕ್ಕೆ ವಿವರವಾದ ವರದಿಯನ್ನು ಸಲ್ಲಿಸಬಹುದೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಸಭೆಯಲ್ಲಿ ಹಾಜರಿದ್ದ ವಿಧಾನಪರಿಷತ್ ಸದಸ್ಯರು ಸಹ ಸದರಿ ಅಭಿಪ್ರಾಯವನ್ನು ಅನುಮೋದಿಸುತ್ತಾ, ಸದರಿ ವಿಷಯವು ನ್ಯಾಯಾಲಯದಲ್ಲಿರುವುದರಿಂದ ಸಭೆಯು ಯಾವುದೇ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟರು.

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಸಭೆಯ ಎಲ್ಲಾ ಸದಸ್ಯರುಗಳ ಅಭಿಪ್ರಾಯಗಳನ್ನು ಕೇಳಿದ ನಂತರ ಅಂತಿಮವಾಗಿ ಪ್ರಸ್ತುತ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿನ 9 ಎಕರೆ ಪ್ರದೇಶಕ್ಕೆ ನ್ಯಾಯಾಲಯದ ನಿರ್ದೇಶನದಂತೆ ಭೂಸ್ವಾಧೀನ ಅಧಿನಿಯಮ 4(1) ರ ಘೋಷಣೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುವ ಕಾರಣ ಉದ್ದೇಶಿತ ಭೂಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದಿಸಲು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅವಕಾಶವಿರುವುದಿಲ್ಲವೆಂದು, ನ್ಯಾಯಾಲಯದ ಹಾಗೂ ಸರ್ಕಾರದ ಮುಂದಿನ ತೀರ್ಮಾನದಂತೆ ಕ್ರಮಕೈಗೊಳ್ಳಬಹುದೆಂದು ಸಭೆಗೆ ತಿಳಿಸಿದರು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಭೂಸ್ವಾಧೀನ ಪ್ರಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ತೆಗೆದುಕೊಂಡಿರುವ ಕ್ರಮಗಳು, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಕಾನೂನು ಸಲಹೆಗಾರರು ನೀಡಿರುವ ಅಭಿಪ್ರಾಯವನ್ನು ಸಭೆಯು ಕೂಲಂಕುಷವಾಗಿ ಚರ್ಚಿಸಿ, ಉದ್ದೇಶಿತ ಭೂ ಪ್ರದೇಶಕ್ಕೆ ಮಾನ್ಯ ಉಚ್ಚನ್ಯಾಯಾಲಯದ ಆದೇಶದನ್ವಯ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ಭೂಸ್ವಾಧೀನ ಕಾಯ್ದೆ 1894 ಪ್ರಕರಣ 4(1) ರ ಮೇರೆಗೆ ಘೋಷಣೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುವ ಹಿನ್ನೆಲೆಯಲ್ಲಿ ವಸತಿ ವಿನ್ಯಾಸ ಅನುಮೋದನೆಗೆ ಅವಕಾಶವಿಲ್ಲದ ಕಾರಣ ವಿವರವಾದ ವರದಿಯನ್ನು ಸರ್ಕಾರದ ಗಮನಕ್ಕೆ ತಂದು, ಮಾನ್ಯ ಉಚ್ಚ

ಶುದ್ಧಪ್ರತಿ

ನ್ಯಾಯಾಲಯಕ್ಕೆ ಈ ವಿಷಯದೊಂದಿಗೆ ಮನವಿ ಸಲ್ಲಿಸಲು, ಸರ್ಕಾರವನ್ನು ಕೋರಲು ಮತ್ತು ಮುಂದೆ ನ್ಯಾಯಾಲಯ / ಸರ್ಕಾರ ನೀಡುವ ಆದೇಶದಂತೆ ಸಭೆಯು ಕ್ರಮವಹಿಸಬಹುದೆಂದು ಸಭೆಯು ಬಹುಮತದಿಂದ ತೀರ್ಮಾನಿಸಿತು. ಈ ಸಭೆಯು ವಿಶೇಷ ಸಭೆಯಾದುದರಿಂದ ಹಾಗೂ ಯಾವುದೇ ಚರ್ಚೆಯ ವಿಷಯಗಳಿಲ್ಲ ವಾದುದರಿಂದ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/–
ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

– ನಕಲು –

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.